**ಅಸಲುದಾವಾ ನಂಃ 28/2025**

**ಪಿ. ಡಬ್ಲ್ಯು 1**

**(ಇಂದು ದಿನಾಂಕಃ 05.06.2026 ರಂದು ಪಿ.ಡಬ್ಲ್ಯು.1 ರವರನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.)**

**ಪಾಟೀ ಸವಾಲುಃ-ಪ್ರತಿವಾದಿ ಪರ ವಕೀಲರಾದ ಶ್ರೀ ಆರ್. ಎಸ್. ಎಚ್. ಜಿ. ರವರಿಂದಃ**

ನಾನು ಶಾರದಾ ಕಮಲಾಕರ ಬಾಂದೇಕರ ಇವರ ಕವರಿಗೆ ಸೇರಿದವನಾಗಿರುತ್ತೇನೆ. ನಾನು ಹಾಗೂ ಕೆಲವು ವಾದಿಯರು ನನ್ನ ಸಹೋದರಿಯಾದ 10 ನೇ ವಾದಿ ಮಂದಾ ಬಾಂದೇಕರ ಇವರಿಗೆ ಪವರ ಆಫ್ ಆಟೋರ್ನಿ ಬರೆದುಕೊಟ್ಟಿದ್ದೇನೆ. ನನ್ನ ಪವರ ಆಫ್ ಆಟೋರ್ನಿಯು ವಾದಪತ್ರದಲ್ಲಿ ಸಹಿ ಮಾಡಿರುತ್ತಾರೆ. ನಾನು, ವಾದಿ ನಂ 2, 6, 7 ಮತ್ತು 8 ರವರು 10 ನೇ ವಾದಿಗೆ ಪವರ ಆಫ್ ಆಟೋರ್ನಿ ಬರೆದುಕೊಟ್ಟಿರುತ್ತೇವೆ. ನಾನು ಮತ್ತು ಪವರ ಆಫ್ ಆಟೋರ್ನಿ ಕೊಟ್ಟ ಎಲ್ಲಾ ವಾದಿಯರು ಕಾರವಾರದಿಂದ ಹೊರತುಪಡಿಸಿ ವಾದಪತ್ರದಲ್ಲಿ ಕಾಣಿಸಿರುವ ಅವರ ವಿಳಾಸದಲ್ಲಿ ವಾಸವಿರುತ್ತಾರೆ. ನನ್ನ ಸಹೋದರಿ ನಂದಾ ರವರನ್ನು 2 ನೇ ವಾದಿಗೆ ಮದುವೆ ಮಾಡಿ ಕೊಡಲಾಗಿದೆ. ಆಕೆ ಅವಳ ಗಂಡನೊಂದಿಗೆ ಪಣಜಿಯಲ್ಲಿ ವಾಸವಿರುತ್ತಾಳೆ. ಸಾಕ್ಷಿ ಮುಂದುವರಿದು, ಅವರೆಲ್ಲರೂ ಕಾರವಾರದ ಮಾಜಾಳಿಗೆ ಹಬ್ಬ ಹರಿದಿನಗಳಲ್ಲಿ ಬಂದು ಹೋಗುತ್ತಾರೆ.

2. ವಾದಪತ್ರದಲ್ಲಿ 9 ಸರ್ವೆ ನಂಬರುಗಳನ್ನು ಉಲ್ಲೇಖಿಸಲಾಗಿದೆ. ಮೂಲತಃ 4 ಸರ್ವೆ ನಂಬರುಗಳಿದ್ದು, ನಂತರ 8 ಸರ್ವೆ ನಂಬರುಗಳಾಗಿವೆ ಎಂದರೆ ನನಗೆ ಗೊತ್ತಿಲ್ಲ. ವಾದಪತ್ರದಲ್ಲಿ ಉಲ್ಲೇಖಿಸಿರುವ ಕ್ರಮ ಸಂಖ್ಯೆ 1 ರಿಂದ 8 ರ ಜಮೀನುಗಳು ಗೇಣಿ ಜಮೀನುಗಳಾಗಿದ್ದವು ಎಂದರೆ ಸರಿ. ಕ್ರಮ ಸಂಖ್ಯೆ 9 ರ ಆಸ್ತಿ ಅಂದರೆ ಸ. ನಂ 1644 ಎ/5 ಕ್ಷೇತ್ರ 1 ಗುಂಟೆ 14 ಆಣೆ ಜಮೀನು ಮುರಾರಿ ಬಾಂದೇಕರ ರವರು ರಸ್ತೆಗೆ ಅನುಕೂಲವಾಗುವಂತೆ ಖರೀದಿಸಿದ್ದರು ಎಂದರೆ ನನಗೆ ಗೊತ್ತಿಲ್ಲ.

**( ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಮುಂದುವರಿದ ಪಾಟೀ ಸವಾಲಿಗೆ ಸಮಯಾವಕಾಶ ಕೇಳಿದ್ದು, ಸಮಯಾವಕಾಶ ನೀಡಿ ಪಾಟೀ ಸವಾಲನ್ನು ಮುಂದೂಡಲಾಯಿತು)**

ಅಸಲುದಾವಾ ನಂಃ 28/2025

ಪಿ. ಡಬ್ಲ್ಯು 1

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ

ಸಹಿ ಇದೆ

ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ. ದ. ನ್ಯಾ ದಂ. ಕಾರವಾರ.